**ಓ.ಎಸ್. ನಂ. 45/2021** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 2.8.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. 2013-14 ನೇ ಸಾಲಿನ ಟ್ಯಾಕ್ಸ ಡಿಮ್ಯಾಂಡ್ ರಿಜಿಸ್ಟರಿನ ದೃಢೀಕೃತ ನಕಲನ್ನು ನಿಪಿ37 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರಿ ಜಿ.ಎನ್.ಎನ್ ವಕೀಲರಿಂದಃ**

ನಿಪಿ37 ದಾಖಲೆಯು ನನ್ನ ಹೆಸರಿನಿಂದ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿರುವ ಟ್ಯಾಕ್ಸ ಡಿಮ್ಯಾಂಡ್ ರಿಜಿಸ್ಟರ್ ಎಂದರೆ ಸರಿ. ಸದರಿ ದಾಖಲೆಯ ಹಿಂಭಾಗದಲ್ಲಿ ಕ್ರಯಪತ್ರ ಸಂಖ್ಯೆ 5757/2020-21 ದಿನಾಂಕ 15.10.2020 ರ ಆಧಾರದ ಮೇರೆಗೆ ಹಕ್ಕು ವರ್ಗಾವಣೆ ಮಾಡಲಾಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿದಾರರು ಪ್ರತಿವಾದಿಯು ಬರೆಸಿಕೊಂಡಿರುತ್ತಾರೆ ಎನ್ನುವರು. ಸದರಿ ದಾಖಲೆಯನ್ನು ನಾನು ದಿನಾಂಕ 8.5.2024 ರಂದು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಕ್ರಯಪತ್ರವಾದ ನಂತರ ಪ್ರತಿವಾದಿಯ ಹೆಸರಿಗೆ ಇ-ಸ್ವತ್ತು ಆಗಿರುತ್ತದೆ ಎಂದರೆ ಸರಿ. ಆ ರೀತಿ ಇ-ಸ್ವತ್ತು ಮಾಡುವಾಗ ಅಳತೆ ಮಾಡಿ ಹಳೆಯ ವಿಸ್ತೀರ್ಣವನ್ನು ರೌಂಡ್ ಆಫ್ ಮಾಡಿ ಮೀಟರ್ ಅಳತೆ ಆಧಾರದ ಮೇಲೆ ವಿಸ್ತೀರ್ಣವನ್ನು ನಮೂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಡಿ1 ಕ್ರಯಪತ್ರ ನೋಂದಣೆಯ ಸಮಯದಲ್ಲಿ ಈಗ ನೋಡುತ್ತಿರುವ ನನ್ನ, ನನ್ನ ಹೆಂಡತಿ, ಪ್ರತಿವಾದಿಯ ಆಧಾರ ಕಾರ್ಡ, ಇಬ್ಬರು ಸಾಕ್ಷಿದಾರರ ಆಧಾರ ಕಾರ್ಡ, ಆಸ್ತಿಗೆ ಸಂಬಂಧಿಸಿದ 2020-21 ನೇ ಸಾಲಿನ ನಮೂನೆ-3 ರ ಪ್ರತಿಯನ್ನು ನೋಂದಣಿ ಕಛೇರಿಗೆ ಹಾಜರುಪಡಿಸಿರುತ್ತೇನೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ37 ದಾಖಲೆಯನ್ನು ಈ ದಾವೆ ಸಲ್ಲಿಸುವ ಸಮಯದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊದರೆ ಇರಲಿಲ್ಲ. ಪ್ರತಿವಾದಿಯ ಹೆಸರಿಗೆ ಇ-ಸ್ವತ್ತು ಆದ ನಂತರ ಬದಲಾವಣೆಯಾದ ಅಸೆಸಮೆಂಟ್ ರಿಜಿಸ್ಟರನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.